# ನಿಮ್ಮೊಡನೆ

## ಲಂಚಾವತಾರದ ವಿರಾಟ್ ಸ್ವರೂಪ ಎಸಿಬಿ ದಾಳಿ ಎನ್ನುವ ಹಲ್ಲಿಲ್ಲದ ಹಾವು

ಪ್ರತಿಸಲ 'ಎಸಿಬಿ' ದಾಳಿ ನಡೆದಾಗಲೂ ರಸಮಯ ಸುದ್ದಿಗಳು ಮಾಧ್ಯಮಗಳಲ್ಲಿ ರಾರಾಜಿಸುತ್ತವೆ. ಜನರಿಂದ ಬಗೆಬಗೆಯ ಪ್ರತಿಕ್ರಿಯೆಗಳೂ ಹೊರಡುತ್ತವೆ. ಆದರೆ ಇಂತಹ ದಾಳಿಗಳು ಭ್ರಷ್ಟಾಚಾರ ತಡೆಯುವಲ್ಲಿ ಕಿಂಚಿತ್ತಾದರೂ ಪರಿಣಾಮ ಉಂಟುಮಾಡಿವೆಯೇ ಎಂದು ಪ್ರಶ್ನಿಸಿಕೊಂಡರೆ ನಿರಾಶಾದಾಯಕವಾದ ಉತ್ತರ ಸಿಗುತ್ತದೆ.

ಭ್ರಷ್ಟಾಚಾರವು ಜನತಂತ್ರದ ಬೇರಿಗೆ ಗೆದ್ದಲಿನಂತೆ ಅಂಟಿಕೊಂಡಿದ್ದು, ವ್ಯವಸ್ಥೆಯನ್ನು ಒಳಗೊಳಗೇ ಕೊರೆಯತೊಡಗಿದೆ. ಸರ್ಕಾರದ ಯಾವುದೇ ಇಲಾಖೆಯ ಕೆಲಸ–ಕಾರ್ಯ ಲಂಚ ನೀಡದೇ ಆಗುವುದಿಲ್ಲ ಎಂಬ ಭಾವನೆ ಜನರಲ್ಲಿದೆ. ಲಂಚಾವತಾರವು ಅಷ್ಟರಮಟ್ಟಿಗೆ ಸಾಂಸ್ಥೀಕರಣ ಮತ್ತು ಸಾರ್ವತ್ರೀಕರಣ ಆಗಿದೆ. ಜನರನ್ನು ಸುಲಿಗೆಗೆ ಒಳಪಡಿಸಿರುವ ಈ ಹಾವಳಿ ವಿರುದ್ಧ ಹೋರಾಟಗಳಾಗಿವೆ. ನಿಯಂತ್ರಿಸಲು ಕಾಯ್ದೆ–ಕಾನೂನುಗಳು ರೂಪುಗೊಂಡಿವೆ. ಪತ್ತೆ ಹಚ್ಚಲು ಪಡೆಗಳಿವೆ, ಸಾಂಸ್ಥಿಕ ವ್ಯವಸ್ಥೆ ಇದೆ. ಆದರೂ ನಿಯಂತ್ರಿಸಲಾಗಿಲ್ಲ. ನಿಯಂತ್ರಿಸುವ ಮಾತು ಒತ್ತಟ್ಟಿಗಿರಲಿ, ಈ ಪಿಡುಗು ದಿನೇ ದಿನೇ ಉಲ್ಬಣಗೊಳ್ಳುತ್ತಲೇ ಇದೆ ಎಂಬುದು ಆತಂಕಕಾರಿ.

ರಾಜ್ಯ ಸರ್ಕಾರವು 2015ರಲ್ಲಿ 'ಭ್ರಷ್ಟಾಚಾರ ನಿಗ್ರಹ ದಳ' (ಎಸಿಬಿ) ಎಂಬ ತನಿಖಾ ವ್ಯವಸ್ಥೆಯನ್ನು ರೂಪಿಸಿತು. ಸರ್ಕಾರಿ ಅಧಿಕಾರಿಗಳು, ನೌಕರರು ಮತ್ತು ಚುನಾಯಿತ ಪ್ರತಿನಿಧಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಎಸಿಬಿ ಹೊಂದಿದೆ. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ರಾಜ್ಯ ಸರ್ಕಾರದ 18 ಅಧಿಕಾರಿಗಳಿಗೆ ಸಂಬಂಧಿಸಿದಂತೆ 20 ಜಿಲ್ಲೆಗಳ 77 ಸ್ಥಳಗಳಲ್ಲಿ ಕಳೆದ ವಾರ ಏಕಕಾಲಕ್ಕೆ ಎಸಿಬಿಯ 300ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿ ಶೋಧ ನಡೆಸಿದ್ದಾರೆ. ಅಪಾರ ಪ್ರಮಾಣದ ಚಿನ್ನ, ಬೆಳ್ಳಿ, ನಗದು, ಆಸ್ತಿ ಪತ್ತೆಯಾಗಿದೆ.

'ಕಸದ ಬುಟ್ಟಿಯಲ್ಲಿ ಚಿನ್ನ', 'ಖಾಲಿ ಸೈಟಲ್ಲಿ ನಗದು!', 'ಭಾರಿ ಮಳಿಗೆಗಳ ಮಾಲೀಕ' ಎಂಬಂತಹ ಶೀರ್ಷಿಕೆಗಳಿಗೆ ಈ ದಾಳಿ ಆಹಾರವಾಗಿದೆ. ಇದಕ್ಕೂ ಹಿಂದೆ ನಡೆಸಿದ ದಾಳಿಯಲ್ಲಿ ನೀರಿನ ಪೈಪ್‌ನಲ್ಲಿ ನೋಟು, ಬಚ್ಚಲು ಮನೆಯ ಕಮೋಡ್‌ನಲ್ಲಿ ಚಿನ್ನ–ಬೆಳ್ಳಿ ಬಚ್ಚಿಟ್ಟಿದ್ದನ್ನು ನೋಡಿದ್ದ ಎಸಿಬಿ ಅಧಿಕಾರಿಗಳು ಈ ಸಲ ಡಸ್ಟ್ ಬಿನ್‌ನಲ್ಲೂ ಹಣದ ಕಂತೆ ಕಂಡು ದಂಗಾದರು ಎಂದು ವರದಿಯಾಗಿದೆ. ಅರಣ್ಯವನ್ನು ರಕ್ಷಿಸಬೇಕಿದ್ದ ಅಧಿಕಾರಿ ಮನೆಯಲ್ಲೇ ಶ್ರೀಗಂಧದ ತುಂಡುಗಳು ಸಿಕ್ಕಿವೆ...

ಪ್ರತಿಸಲ ದಾಳಿ ನಡೆದಾಗಲೂ ಇಂತಹ ರಸಮಯ ಸುದ್ದಿಗಳು ಪತ್ರಿಕೆಗಳಲ್ಲಿ ರಾರಾಜಿಸುತ್ತವೆ. ದೃಶ್ಯ ಮಾಧ್ಯಮಗಳಲ್ಲಿ ಇಡೀ ದಿನ ಬಿತ್ತರಗೊಳ್ಳುತ್ತವೆ. ಗ್ರಹಿಸುವ, ಅರ್ಥೈಸಿಕೊಳ್ಳುವ ಸಾಮರ್ಥ್ಯಕ್ಕೆ ಅನುಗುಣವಾಗಿ ಜನರಿಂದ ಬಗೆಬಗೆಯ ಪ್ರತಿಕ್ರಿಯೆಗಳೂ ಹೊರಡುತ್ತವೆ. ಆದರೆ ಇಂತಹ ದಾಳಿಗಳು ಭ್ರಷ್ಟಾಚಾರ ತಡೆಯುವಲ್ಲಿ ಕಿಂಚಿತ್ತಾದರೂ ಪರಿಣಾಮ ಉಂಟುಮಾಡಿವೆಯೇ ಎಂದು ಪ್ರಶ್ನಿಸಿಕೊಂಡರೆ ನಿರಾಶಾದಾಯಕವಾದ ಉತ್ತರ ಸಿಗುತ್ತದೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಗಳಿಸಿರುವ ಆರೋಪದಡಿ ದಾಖಲಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಸಿಬಿ ಕಳೆದ ವರ್ಷ ದಾಖಲೆ ಬಿಡುಗಡೆ ಮಾಡಿತ್ತು. ಅದರ ಪ್ರಕಾರ, 2016ರಿಂದ 2021ರ ಅಂತ್ಯದವರೆಗೆ ರಾಜ್ಯದಲ್ಲಿ 1,803 ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಬರೀ 10 ಮಂದಿಗೆ ಶಿಕ್ಷೆಯಾಗಿದೆ. 25 ಮಂದಿ ಆರೋಪಮುಕ್ತರಾಗಿದ್ದಾರೆ. ಉಳಿದ ಪ್ರಕರಣಗಳು ಇನ್ನೂ ವಿಚಾರಣಾ ಹಂತದಲ್ಲೇ ಇವೆ! ದಾಳಿ ನಡೆಸುವುದಕ್ಕೆ ತೋರುವ ಉತ್ಸಾಹವು ಭ್ರಷ್ಟರಿಗೆ ಶಿಕ್ಷೆ ಕೊಡಿಸುವಲ್ಲಿ ಇಲ್ಲದೇ ಹೋದರೆ ಅದರಿಂದ ಆಗುವ ಪ್ರಯೋಜನವಾದರೂ ಏನು? ಅದು ರವಾನಿಸುವ ಸಂದೇಶವಾದರೂ ಎಂತಹುದು?

ಎಸಿಬಿಗೆ ಪ್ರಾಥಮಿಕ ತನಿಖೆಗೆ ಸೀಮಿತವಾಗಿ ಮುಕ್ತ ಅಧಿಕಾರವಿದೆಯಾದರೂ ಭ್ರಷ್ಟಾಚಾರ ಆರೋಪಕ್ಕೆ ಮೇಲ್ನೋಟಕ್ಕೆ ಸಾಕ್ಷ್ಯಗಳು ಲಭ್ಯವಿದ್ದರೂ ನೇರವಾಗಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲು ಅಧಿಕಾರವಿಲ್ಲ. ಪ್ರತಿಸಲ ಎಫ್‌ಐಆರ್ ದಾಖಲಿಸಲು ಸರ್ಕಾರದಿಂದ ಅನುಮತಿ ಪಡೆಯಬೇಕಿದೆ. ಇನ್ನೊಂದೆಡೆ ತನಿಖೆ ಮುಗಿಸಿ ಆರೋಪಪಟ್ಟಿ ಸಲ್ಲಿಕೆಗೂ ಅನುಮತಿ ಬೇಕು. ಎಫ್‌ಐಆರ್ ದಾಖಲಿಸಲು ಹಾಗೂ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ನೂರಾರು ಪ್ರಸ್ತಾವಗಳನ್ನು ತನ್ನ ಬಳಿಯೇ ಇರಿಸಿಕೊಂಡು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂಬ ಆರೋಪ ಇದೆ. ಇದರಿಂದಾಗಿ ಎಸಿಬಿ ನಡೆಸುತ್ತಿರುವ ಭ್ರಷ್ಟಾಚಾರ ನಿಗ್ರಹದ ಕೆಲಸ ನಿರೀಕ್ಷಿತ ಮಟ್ಟದಲ್ಲಿ ಫಲ ನೀಡುತ್ತಿಲ್ಲ.

ಎಸಿಬಿ ದಾಳಿಗಳು ಕಣ್ಣೊರೆಸುವ ತಂತ್ರವಾಗಿ, ತೋರಿಕೆಯ ನಡೆಯಾಗಿ ಯಾರಿಗಾದರೂ ಕಾಣಿಸುತ್ತಿದ್ದರೆ ಅದಕ್ಕೆ ಇಂತಹ ನ್ಯೂನತೆಗಳೇ ಕಾರಣ. ಸರ್ಕಾರದ ಅಧೀನದಲ್ಲಿ ಇರುವುದೇ ಈ ಸಂಸ್ಥೆಗೆ ದೊಡ್ಡ ಮಿತಿಯಾಗಿದೆ. ಭ್ರಷ್ಟಾಚಾರ ನಿಗ್ರಹ ಕೆಲಸ ಪರಿಣಾಮಕಾರಿಯಾಗಿ ನಡೆಯಬೇಕು ಎಂದು ಸರ್ಕಾರ ಪ್ರಾಮಾಣಿಕವಾಗಿ ಭಾವಿಸುವುದೇ ಆದಲ್ಲಿ ಎಸಿಬಿಗೆ ಬಲ ತುಂಬಬೇಕು. ಇದನ್ನು ಸ್ವಾಯತ್ತ ಸಂಸ್ಥೆಯಾಗಿ ರೂಪಿಸಬೇಕು. ಆಗ ಸಂಸ್ಥೆಯ ಕೆಲಸಗಳ ಬಗೆಗೆ ಒಂದಷ್ಟು ವಿಶ್ವಾಸ ಮೂಡಬಹುದು. ಇಲ್ಲವಾದರೆ ದಾಳಿ, ಸುದ್ದಿ, ಪ್ರಚಾರಕ್ಕೆ ಸೀಮಿತವಾಗಿ ಉಳಿಯುತ್ತದೆ. ಲಂಚದ ಹಾವಳಿ ಅಬಾಧಿತವಾಗಿ ಮುಂದುವರಿಯುತ್ತದೆ.

■ ಎನ್‌. ಉದಯಕುಮಾರ್



ಈಶ್ವರ್